ಖುಷಿ ಓದಿಗಾಗಿ

# ಕಥಾ ಮಂಟಪ



ಇಲ್ಲಿನ ಕಥೆಗಳನ್ನು ನೀವೂ ಓದಿರಿ;
ಬೇರೆಯವರಿಗೂ ಓದಿ ಹೇಳಿರಿ.

ಮುಖ ಫೋಟೋ

ನವೆಂಬರ್–ಡಿಸೆಂಬರ್ ೨೦೧೮–೧೯

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
**Dhwani Educational Resource Centre**

ಪೂರಣ ಯೋಜನೆ
Poorana 2018-19 Project
is Supported by Many
Individual Donors

ಈ ಸಲದ ....

# ಕಥೆಗಳು

★ ಚೆನ್ನಿ, ಚಂದ್ರಿ ಮತ್ತು ಹುಣಸೆಮರ ೩

★ ಕಾಡಿನ ಜಾಣರು ೧೨

★ ಊಟದ ಚಮತ್ಕಾರ ೨೫

★ Hungry Wolf ೨೯

# ಚೆನ್ನಿ, ಚಂದ್ರಿ ಮತ್ತು ಹುಣಸೆಮರ



ಚೆನ್ನಿ, ಚಂದ್ರಿ ಮತ್ತು ಹುಣಸೆಮರ ಕಥೆಯನ್ನು ಕನ್ನಡ 'ನಾನು ಮತ್ತು ಹುಂಚಿಮರ' ಪಾಠಕ್ಕೆ ಪೂರಕವಾಗಿ ಇಲ್ಲಿ ಕೊಡಲಾಗಿದೆ. ಈಗಿನ ಮೂಢನಂಬಿಕೆಯ ಸ್ಥಿತಿಯ ಕುರಿತು ಮನೆ/ತರಗತಿಯಲ್ಲಿ ಚರ್ಚಿಸು.

ಚಂದ್ರಿ ಮತ್ತು ಚೆನ್ನಿ ಇವರಿಬ್ಬರೂ ಅಕ್ಕ ತಂಗಿಯರು. ಬಹಳಾನೆ ಚುರುಕಾದ ಹುಡುಗಿಯರು. ಒಂದ್ ದಿನ ಇವರಿಬ್ರೂ ಹೀಗೆ ಆಟ ಆಡ್ತಾ ಆಡ್ತಾ ಅವರ ಮನೆ ಹಿತ್ತಲಿಗೆ ಬಂದರು. ಹಿತ್ತಲಲ್ಲಿ ಇದ್ದ ಹುಣಸೆ ಮರದ ಕೆಳಗೆ ಕುಂಟೆಬಿಲ್ಲೆ ಆಡಲು ಶುರುಮಾಡಿದರು. ಅಷ್ಟರಲ್ಲಿ ಚೆನ್ನಿಗೆ ಹುಣಸೇ ಹಣ್ಣು ತಿನ್ನಬೇಕು

ಅನ್ನಿಸಿತು. ಆಗ "ಲೇ ಅಕ್ಕಾ, ನನಗೆ ಹುಣಸೆ ಹಣ್ಣು ತಿನ್ನಬೇಕಾಗಿದೆ, ಕಿತ್ತು ಕೊಡೆ" ಅಂದಳು. ಆಗ ಚಂದ್ರಿ "ಆಯ್ತು ತಡಿಯೆ ಯಾವಾಗಲೂ ನಿಂದು ಇದೇ ಆಯ್ತು – ಹುಣಸೆ ಹಣ್ಣು ಚೀಪೋದು ನಾಲಿಗೆ ಉರೀತಿದೆ ಅನ್ನೋದು" ಎಂದು ಗೊಣಗುತ್ತಾ ಹುಣಸೆ ಮರದಲ್ಲಿ ನೇತಾಡುತ್ತಿದ್ದ ಒಂದೆರಡು ಹುಣಸೆ ಹಣ್ಣನ್ನ ಕಿತ್ತು ಚೆನ್ನಿ ಕೈಗೆ ಕೊಟ್ಟಳು. ಚೆನ್ನಿ ಹುಣಸೆ ಹಣ್ಣನ್ನು ತಿನ್ನುತ್ತ "ಅಹಾ, ಎಷ್ಟು ಚೆನ್ನಾಗಿದೆ ಅಕ್ಕಾ" ಎಂದು ಹುಣಸೆಯ ರುಚಿಯನ್ನು ಸವಿಯುತ್ತಿರುವಾಗಲೆ "ಗುಳುಕ್" ಅನ್ನೋ ಸದ್ದು ಬಂತು. ಒಂದು ಕ್ಷಣ ಚೆನ್ನಿ ಸುಮ್ಮನೆ ಬಿಟ್ಟ ಕಣ್ಣು ಬಿಟ್ಟಂಗೆ ನಿಂತುಬಿಟ್ಟಳು.

ಇವಳು ಹಾಗೆ ಸುಮ್ಮನೆ ನಿಂತದ್ದನ್ನು ನೋಡಿ ಚಂದ್ರಿ "ಲೇ ಚೆನ್ನಿ, ಅದ್ಯಾಕೆ ಹಂಗೇ ನಿಂತಿದ್ದೀಯ" ಎಂದು ಎಚ್ಚರಿಸಿದಳು. ದಡಕ್ಕನೆ ಎಚ್ಚರಗೊಂಡು ಚೆನ್ನಿ ಗಾಬರಿಯಿಂದ, "ಅಕ್ಕಾ, ನಾನು ಹುಣಸೆಹಣ್ಣಿನ ಬೀಜವನ್ನ ನುಂಗಿಬಿಟ್ಟೆ" ಎಂದಳು. ಅದಕ್ಕೆ ಚಂದ್ರಿ "ಅಷ್ಟೇ ತಾನೆ,

ಅದಕ್ಯಾಕೆ ಅಷ್ಟೊಂದು ಗಾಬರಿಯಾಗ್ತೀಯ. ನಾಳೆ ನಿನ್ನ ಹೊಟ್ಟೇಲಿ ಹುಣಸೆ ಮರ ಬೆಳಿಯುತ್ತೆ. ಆವಾಗ ನೀನು ಎಷ್ಟು ಬೇಕಾದರೂ ಹುಣಸೆಹಣ್ಣು ಕಿತ್ತುಕೊಂಡು ತಿನ್ನಬಹುದು. ಬಿಡು, ಯಾಕ್ ಚಿಂತೆ ಮಾಡ್ತೀಯಾ" ಅಂದಳು. ಹಾಗಂದವಳೇ ಚಂದ್ರಿಗೆ ಅವಳಮ್ಮ ಹೇಳಿದ್ದ ಕೆಲಸದ ನೆನಪಾಗಿ, ಕೆಲಸ ಮಾಡಿಲ್ಲ ಅಂದ್ರೆ ಬೈಸ್ಕೋಬೇಕಾಗುತ್ತೆ ಎಂದು ಗೊತ್ತಿದ್ದರಿಂದ ಮನೆಯ ಒಳಗೆ ಓಡಿದ್ಲು.

ಅಷ್ಟರಲ್ಲಾಗಲೇ ಚೆನ್ನಿಗೆ ಒಳಗೊಳಗೇ ಒಂಥರ ಭಯ ಶುರುವಾಗಿಬಿಟ್ಟಿತ್ತು. ನನ್ನೊಳಗೆ ಹುಣಸೆ ಮರ ಬೆಳೆದುಬಿಟ್ಟರೆ ಏನಪ್ಪಾ ಮಾಡೋದು ಅಂತ ಮನಸ್ಸಲ್ಲೇ ಅನ್ಕೋತಾ ಹಾಗೇನೆ ಹಿತ್ತಲಲ್ಲಿದ್ದ ಒಂದು ಕಲ್ಲಿನ ಮೇಲೆ ಕುಳಿತಳು. ತನ್ನ ಮೊಳಕಾಲಿನ ಮೇಲೆ ಮೊಳಕೈ ಇಟ್ಟುಕೊಂಡ್ಲು. ಅಂಗೈನ್ನು ಕೆನ್ನೆಗೆ ಆಸರೆಯಾಗಿ ಒತ್ತಿ ಚಿಂತಿಸುತ್ತಿರಬೇಕಾದರೆ ಅವಳ ತಲೆಯಿಂದ ಒಂದು ಹುಣಸೆಮರ ಬೆಳೆದೇ ಬಿಟ್ಟಿತು. ತಲೆಯ ಮೇಲೆ ಏನೋ ಓಡಾಡಿದಂತಾಗಿ ತನ್ನ

ಕೈಯಿಂದ ತಲೆಯನ್ನು ಮುಟ್ಟಿನೋಡಿಕೊಳ್ಳುತ್ತಾಳೆ – ಹಣಸೆಮರ. ಚೆನ್ನಿ ತಕ್ಷಣವೇ ಆ ಹಣಸೆಮರವನ್ನು ಜೋರಾಗಿ ತಲೆಯಿಂದ ಕಿತ್ತು ಹಿತ್ತಲಲ್ಲೇ ಒಂದು ಕಡೆ ಮಣ್ಣಲ್ಲಿ ನೆಟ್ಟಳು. ನೆಡುತ್ತಿದ್ದಂತೆಯೇ ಹಣಸೆಮರ ದೊಡ್ಡದಾಗಿ ಬೆಳೆದುಬಿಟ್ಟಿತು.

ನೋಡುನೋಡುತ್ತಿದ್ದಂತೆಯೇ ಗಿಡದ ತುಂಬೆಲ್ಲ ಹಣಸೆ ಹಣ್ಣುಗಳು ಮೂಡಿದವು. ಚೆನ್ನಿಗೆ ಅವುಗಳನ್ನು ನೋಡಿ ಬಾಯಲ್ಲಿ ನೀರೂರಿತು. ಹಣಸೆಹಣ್ಣನ್ನು ಕೀಳಲು ಮರ ಹತ್ತುವುದು ಹೇಗೆಂದು ಯೋಚಿಸುತ್ತಿರುವಾಗಲೇ ಮರದ ಬುಡದಲ್ಲಿ ಮೆಟ್ಟಿಲುಗಳು ಕಾಣಿಸಿದವು. ಚೆನ್ನಿಗೆ ಸಂತೋಷವೋ ಸಂತೋಷ. ಅವಳು ಹಣ್ಣುಗಳನ್ನು ಕಿತ್ತುಕೊಳ್ಳಲು ಮೆಟ್ಟಿಲುಗಳನ್ನು ಹತ್ತಿದಳು. ಮೆಟ್ಟಿಲುಗಳು ಮರದ ತುದಿಯವರೆಗೂ ಬಂದು, ಹಾಗೆಯೇ ಅವುಗಳು ಮೋಡಗಳನ್ನೂ ದಾಟಿ ಆಕಾಶದವರೆಗೂ ಹಬ್ಬಿದ್ದವು. ಚೆನ್ನಿ ಮೆಟ್ಟಿಲುಗಳನ್ನು ಹತ್ತುತ್ತಲೇ ಹೋದಳು. ಹಾಗೆಯೇ ಮೇಲೆ, ಮೇಲೆ,

ಮೇಲೆ...,

ಚೆನ್ನಿ ಖುಷಿಯಿಂದ ಮೆಟ್ಟಿಲುಗಳನ್ನು ಹತ್ತುತ್ತಲೇ ಇದ್ದಳು. ಅವಳಿಗೆ ಆಕಾಶದಲ್ಲಿ ತೇಲಾಡುವ ಅನುಭವ ಮೋಜೆನಿಸುತ್ತಿತ್ತು. ಹಾಗೆಯೇ ಬಹಳ ದೂರದವರೆಗೂ ಅವಳು ಮೆಟ್ಟಿಲುಗಳನ್ನು ಏರುತ್ತಲೇ ಇದ್ದಳು. ಇದ್ದಕ್ಕಿದ್ದಂತೆ ಅವಳ ಕಣ್ಣೆದುರು "ಧುಥ್" ಎಂದು ಒಂದು ಅರಮನೆ ಪ್ರತ್ಯಕ್ಷವಾಯಿತು. ಚೆನ್ನಿ ಕಣ್ಣರಳಿಸಿ ನೋಡುತ್ತಾಳೆ ಥಳಥಳ ಹೊಳೆಯುವ ಶುಭ್ರವಾದ, ಸುಂದರವಾದ ಗಾಜಿನ ಅರಮನೆ ಕಾಣಿಸಿತು. ಚೆನ್ನಿ ಕಾಲಿಡಲೋ ಬೇಡವೋ ಎನ್ನುತ್ತ ನಿಧಾನಕ್ಕೆ ಒಳಗಡೆ ಹೋದಳು. ಅಲ್ಲಿ ಚಂದ್ರ ನಕ್ಷತ್ರಗಳಿಂದ ಅಲಂಕರಿಸಿದ ತೂಗುಮಂಚ ಕಾಣಿಸಿತು. ಆ ತೂಗುಮಂಚದಲ್ಲಿ ಮೋಡದಿಂದಲೇ ಮಾಡಿದ ಮೆತ್ತೆ(ದಿಂಬು)ಗಳಿದ್ದವು. ಚೆನ್ನಿ ತೂಗುಮಂಚದಲ್ಲಿ ಕುಳಿತು ತೂಗಿಕೊಳ್ಳುತ್ತ ಮೈಮರೆತಳು.

ಹಾಗೆಯೇ ಬಹಳ ಹೊತ್ತಾದ ನಂತರ ಅರಮನೆಯನ್ನೆಲ್ಲಾ ಒಮ್ಮೆ ಸುತ್ತಿ ನೋಡೋಣ ಎನಿಸಿತು. ತೂಗುಮಂಚದಿಂದ ಎದ್ದು ಅಲ್ಲಿಯ ಎಲ್ಲ ಕೊಠಡಿಗಳನ್ನು ನೋಡಿಕೊಂಡು ನಿಧಾನವಾಗಿ ಬರುತ್ತಿರಲು ಅವಳಿಗೊಂದು ಕಿಟಕಿ ಕಾಣಿಸಿತು. ಅವಳು ಕಿಟಕಿಯಿಂದ ಕೆಳಗೆ ಬಗ್ಗಿ ನೋಡುತ್ತಾಳೆ. ಭೂಮಿ ಒಂದು ಸಣ್ಣ ಮೂಸಂಬಿಯ ಹಾಗೆ ಕಾಣುತ್ತಿದೆ. ಅವಳ ಹೃದಯ “ಢವಢವ” ಎಂದು ಹೊಡೆದುಕೊಳ್ಳಲು ಶುರು ಮಾಡಿತು.

“ಅಯ್ಯೋ ಇದೇನಿದು?! ನಾನು ಇಷ್ಟು ಮೇಲಕ್ಕೆ ಬಂದಿದ್ದೀನಲ್ಲ, ಇನ್ನ ವಾಪಸ್ಸು ಹೋಗೋದು ಹೆಂಗಪ್ಪ” ಎಂದು ಅಂದುಕೊಳ್ಳುತ್ತಿರುವಾಗಲೇ ಅವಳು ಹತ್ತಿ ಬಂದಿದ್ದ ಮೆಟ್ಟಿಲುಗಳು ಕಣ್ಣಿಗೆ ಬಿದ್ದವು. ಚೆನ್ನಿ ತಡಮಾಡಲಿಲ್ಲ, ಬೇಗ ಬೇಗನೆ ಮೆಟ್ಟಿಲುಗಳನ್ನು ಇಳಿಯಲು ಶುರು ಮಾಡಿದಳು. ಅವುಗಳು ಆಕಾಶದಲ್ಲಿನ ಅರಮನೆಯಿಂದ ಶುರುವಾಗಿ, ಮೋಡಗಳಲ್ಲಿ ಹಾದು ಕೊನೆಗೆ ಹುಣಸೆ ಮರದ

ಬುಡದಲ್ಲಿ ಬಂದು ಕೊನೆಗೊಂಡವು.

ಚೆನ್ನಿ ಮರದಿಂದ ಕೆಳಗಿಳಿದು "ಉಸ್ಸಪ್ಪಾ" ಎಂದು ಜೋರಾಗಿ ಒಮ್ಮೆ ಉಸಿರು ಬಿಟ್ಟಳು. ಅವಳಿಗೆ ಮೆಟ್ಟಿಲು ಇಳಿದು, ಇಳಿದು ಸುಸ್ತಾಗಿತ್ತು. ಸ್ವಲ್ಪ ನೀರಾದ್ರೂ ಕುಡಿಯೋಣ ಎಂದು ಹಿತ್ತಲು ಬಾಗಿಲು ಇದ್ದ ಕಡೆ ತಿರುಗಿದಳು. ಇನ್ನೇನು ಅವಳು ಮನೆಯ ಒಳಗೆ ಕಾಲು ಇಡಬೇಕು ಅನ್ನುವಷ್ಟರಲ್ಲಿಯೇ "ಚೆನ್ನಿ..., ಚೆನ್ನಿ ನೀನೊಬ್ಬಳೆ ಮನೆ ಒಳಗೆ ಹೋಗ್ತೀಯ? ನಾನೂ ಬರ್ತೀನಿ. ನನ್ನನ್ನು ಕರಕೊಂಡು ಹೋಗು" ಎಂದು ದುಂಬಾಲು ಬಿದ್ದಿತು ಹುಣಸೆ ಮರ. ಚೆನ್ನಿಗೆ ಫಜೀತಿಗಿಟ್ಟುಕೊಂಡಿತು.

"ಅಯ್ಯೋ ಇದೇನಪ್ಪಾ, ತಲೆ ಮೇಲಿದ್ದ ಹುಣಸೆಮರಾನಾ ಮಣ್ಣಲ್ಲಿ ಇಟ್ನಲ್ಲ ಸದ್ಯ ಮುಗೀತು ಅಂದರೆ ಮತ್ತೆ ಇದು ನನ್ನ ತಲೆ ಮೇಲೇನೆ ಬರೋ ಹಾಗೆ ಕಾಣ್ತಾ ಇದೆಯಲ್ಲಾ" ಎಂದು ಅಂದುಕೊಳ್ಳುವಷ್ಟರಲ್ಲೇ ಹುಣಸೆ ಮರ ಬಂದು ಚೆನ್ನಿ ತಲೆ ಮೇಲೆ ಕೂತೇ ಬಿಟ್ಟಿತು. ಚೆನ್ನಿ

ಜೋರಾಗಿ ಕಿರುಚಲು ಶುರು ಮಾಡಿದಳು. "ಅಮ್ಮಾ ನನ್ ತಲೆ ಮೇಲೆ ಹಣ್ಸೆಮರ, ಅಮ್ಮಾ ನನ್ ತಲೆ ಮೇಲೆ ಹಣ್ಸೆಮರ" ಎಂದು.

"ಏನ್ ಹುಡುಗಿಯರೋ ಏನೋ! ಸರಿಯಾದ ಸಮಯಕ್ಕೆ ಊಟ ಮಾಡೊಲ್ಲ, ಮೂರು ಹೊತ್ತೂ ಆಟಾನೆ ಇವರಿಗೆ" ಎಂದು ಚೆನ್ನಿಯ ಅಮ್ಮ ಗೊಣಗುತ್ತ ಚೆನ್ನಿಯನ್ನು ಕರೆಯಲು ಹಿತ್ತಲಿಗೆ ಬಂದರು.

ಅಮ್ಮನ ಧ್ವನಿ ಕೇಳಿದ್ದೆ ತಡ ಚೆನ್ನಿ ವಾಸ್ತವಕ್ಕೆ ಬಂದಳು. ಎದುರಿಗೆ ಅಮ್ಮ ಮತ್ತು ಅಕ್ಕ ಚಂದ್ರಿ ನಿಂತಿರುವುದು ಕಂಡಿತು. ಅಮ್ಮನನ್ನು ನೋಡಿದ್ದೇ ತಡ "ಅಮ್ಮ..., ನನ್ನ ತಲೆ ಮೇಲೆ ಹುಣಸೆಮರ ಬೆಳೆದಿತ್ತು, ನಿನ್ನ ನೋಡಿದ್ದೆ ತಡ, 'ಥಟ್' ಅಂತ ಮಾಯಾ ಆಗೋಯ್ತು ನೋಡಮ್ಮ" ಎನ್ನುತ್ತ ಅಮ್ಮನನ್ನು ಅಪ್ಪಿಕೊಂಡಳು. ಅಮ್ಮನ ಜೊತೆಯಲ್ಲೆ ಇದ್ದ ಚಂದ್ರಿ, ಚೆನ್ನಿಯನ್ನು ನೋಡಿ ಕಣ್ಣು ಮಿಟುಕಿಸಿ ತುಂಟ ನಗೆ ಬೀರಿದಳು.

“ಎಲ್ಲೋ ಆಟ ಆಡುವ ಸಮಯದಲ್ಲಿ ಬೆಚ್ಚಿ ಬಿದ್ದಿರಬಹುದು” ಎಂದು ಚೆನ್ನಿಯ ಅಮ್ಮ ಮನಸ್ಸಲ್ಲೇ ಅಂದುಕೊಂಡು, “ನಡಿಯಮ್ಮ, ಎಷ್ಟು ಹೊತ್ತಿನಿಂದ ನಿನ್ನ ಊಟಕ್ಕೆ ಕರೀತಾನೆ ಇದ್ದೀನಿ” ಎಂದು ಮಗಳನ್ನು ಮುದ್ದಿಸುತ್ತ ಒಳಗೆ ಕರೆದುಕೊಂಡು ಹೋದರು.*

**ರಚನೆ: ಪ್ರೇಮಾ ಶಿವಾನಂದ**

**ಆಕರ: 23 ಏಪ್ರಿಲ್ 2017, ಪ್ರಜಾವಾಣಿ ದಿನಪತ್ರಿಕೆ**

**ಆಲೋಚಿಸು:**

* ಚೆನ್ನಿಯು ಕಂಡ ಕನಸಿನಂತೆ, ನಿನಗೂ ಕನಸುಗಳು ಬಿದ್ದಿರಬಹುದಲ್ಲವೇ? ಅದರ ಕುರಿತು ಗೆಳೆಯ/ಗೆಳತಿಯರೊಂದಿಗೆ ಮಾತನಾಡು.

# ಕಾಡಿನ ಜಾಣರು



ಅರಣ್ಯ ಶಾಲೆಗೆ ದಸರಾ ರಜೆ ಕೊಡಲಾಗಿತ್ತು. ಶಾಲಾ ಕೆಲಸದ ಕೊನೆಯ ದಿನ ಅರಣ್ಯ ಶಾಲೆಯ ಹೆಡ್‌ಮಾಸ್ಟರ್‌ರಾದ ಬಿಳಿಕರಡೆಪ್ಪ ಎಲ್ಲಾ ವಿದ್ಯಾರ್ಥಿಗಳನ್ನೂ ಪ್ರಾರ್ಥನಾ ಸ್ಥಾನ ದೊಡ್ಡಾಲದ ಮರದ ಕೆಳಗೆ ಸೇರಿಸಿ ಗೊಗ್ಗರು ಗಂಟಲಲ್ಲಿ ತಾಕೀತು ಮಾಡುತ್ತ, ರಜಾ ಕಾಲವನ್ನು ಯಾರೂ ತುಂಟಾಟ, ಹುಡುಗಾಟದಲ್ಲಿ ಕಳೆಯಬಾರದು. ಕೋತಿಗಳು ಹೊಸದಾಗಿ ಕಲಿತ ತಿಪ್ಪರಲಾಗವನ್ನು ಚೆನ್ನಾಗಿ ಅಭ್ಯಾಸ

ಮಾಡಬೇಕು. ಹೆಗ್ಗಣಗಳು ಬಿಲ ಕೊರೆಯುವ ಕಲೆಯಲ್ಲಿ ಪರಿಣಿತರಾಗಬೇಕು. ನವಿಲುಗಳು ಹೊಸದಾಗಿ ಕಲಿಸಿದ ನೃತ್ಯವನ್ನು ಚೆನ್ನಾಗಿ ಕಲಿತು ಬರಬೇಕು. ನರಿಗಳು ಮತ್ತು ಮೊಲಗಳು ಮೊನ್ನೆ ತಾನೇ ಕಲಿಸಿದ ಸಂಗೀತ ಹಾಗೂ ಗೆಣಸು ತಿನ್ನುವ ಪಾಠಗಳನ್ನು ಮನನ ಮಾಡಿಕೊಳ್ಳದಿದ್ದರೆ ಮುಂದಿನ ಶಾಲಾರಂಭದಲ್ಲಿ ಅವರೆಲ್ಲರನ್ನೂ ಒಬ್ಬೊಬ್ಬರಾಗಿ ತರಗತಿಗಳಿಂದ ಹೊರದೂಡಬೇಕಾಗುತ್ತದೆ ಎಂದು ಅಪ್ಪಣೆ ನೀಡಿದರು.

ಆಗಲೇ ಸೀಳುನಾಯಿಗಳಲ್ಲಿ ಅತ್ಯಂತ ತುಂಟನಾದ ಮೊಂಡ ಬಾಲಣ್ಣ ಎದ್ದು ನಿಂತು, "ಸಾರ್, ನಮಗೆ ಏನೂ ಕೆಲಸ ಇಲ್ಲವೋ?" ಎಂದು ಕೂಗಿದ. ಆಗ ಅವರ ತರಗತಿಯ ಉಪಾಧ್ಯಾಯರಾದ ಶ್ರೀ ತೋಳಪ್ಪನವರು 'ಸುಮ್ನೆ ನಿಂತ್ಕ' ಅಂತ ಗದರಿ ತಲೆಗೊಂದು ಏಟು ಬಿಗಿದಿದ್ದರು. ಜಿಂಕೆಗಳ ತರಗತಿಯ ಉಪಾಧ್ಯಾಯಿನಿಯಾದ ಕುಮಾರಿ ಹರಿಣಾಕ್ಷಿಯವರು ಮಾತ್ರ ತಮ್ಮ ತರಗತಿಯ

ಮಕ್ಕಳು ಪಕ್ಕದ ಕಾಡಿಗೆ ಪಿಕ್‌ನಿಕ್ ಹೋಗುವ ಕಾರ್ಯಕ್ರಮ ಹಾಕಿಕೊಂಡಿರುವುದನ್ನು ಮೊದಲೇ ಹೆಡ್‌ಮಾಸ್ಟರ್ ಶ್ರೀ ಬಿಳಿಕರಡೆಪ್ಪನವರಿಗೆ ತಿಳಿಸಿದ್ದರಿಂದ ಅವರಿಗೆ ಯಾವ ತಾಕೀತು ಕೂಡ ಇರಲಿಲ್ಲ. ಜಿಂಕೆಗಳು ಪಿಕ್‌ನಿಕ್‌ಗೆ ಹೊರಡುವ ಸುದ್ದಿ ಮಂಗಗಳ ತರಗತಿಯ ಅಧ್ಯಾಪಕಿ ಕುಮಾರಿ ಕರಿಮುಸುಡಮ್ಮನವರಿಗೆ ತಿಳಿದು, ಅವರು ಮರುದಿನ ಹರಿಣಾಕ್ಷಮ್ಮನವರನ್ನು ಭೇಟಿಮಾಡಿ, 'ನಿಮ್ಮ ಪಿಕ್‌ನಿಕ್‌ನಲ್ಲಿ ನಮ್ಮ ತರಗತಿಯ ಹಲವು ಹುಡುಗ ಹುಡುಗಿಯರನ್ನು ದಯಮಾಡಿ ಸೇರಿಸಿಕೊಳ್ಳಿ' ಎಂದು ವಿನಂತಿಸಿದಾಗ, ಹರಿಣಾಕ್ಷಮ್ಮನವರು ಆಗಲಿ ಎಂದರು.

ಈ ಸಂಗತಿ ತಿಳಿದ ಕಾಡುಕೋಳಿಗಳ ತರಗತಿಯ ಅಧ್ಯಾಪಕ ಶ್ರೀ ಕೆಂಪುಜುಟ್ಟಪ್ಪನವರು ಮರುದಿನ ಹರಿಣಾಕ್ಷಿಯವರನ್ನು ಭೇಟಿಮಾಡಿ, 'ನೋಡಿ, ನಮ್ಮ ಕಾಡುಕೋಳಿಗಳು ಯಾವ ತಂಟೆಯೂ ಮಾಡುವುದಿಲ್ಲ. ಅಲ್ಲದೆ ಜಿಂಕೆ-ಕೋತಿಗಳು ಓಡುವ ದಾರಿಯಲ್ಲೇ

ಹಿಂಬಾಲಿಸುತ್ತ ಬರುತ್ತವೆ. ಅಲ್ಲದೆ ಜೊತೆಗೆ ನಾನೂ ಬರುವುದರಿಂದ ಯಾವ ಗದ್ದಲವೂ ಆಗದು' ಎಂದರು.

ಹರಿಣಾಕ್ಷಮ್ಮನವರಿಗೆ ಚಂದ ಚಂದದ ಬಣ್ಣಬಣ್ಣದ ಕಾಡುಕೋಳಿಗಳು ಜೊತೆಗೆ ಇದ್ದರೆ ಪಿಕ್‌ನಿಕ್‌ಗೆ ಕಳೆ ಬರುತ್ತದೆ. ಅಲ್ಲದೆ ಕೆಂಪುಜುಟ್ಟಪ್ಪನವರು ಒಳ್ಳೆಯ ಹಾಡುಗಾರರು. ಅವರು ಹಾಗೂ ತರಗತಿಯ ಕೋಳಿಗಳೂ ಬರಲಿ ಎಂದು ಅನ್ನಿಸಿತು. ಹಾಗಾಗಿ ಒಪ್ಪಿದರು.

ಒಂದು ನಿಶ್ಚಿತ ದಿನ ನಸುಕಿಗೇ ಹದಿನಾರು ಜಿಂಕೆಗಳು, ಆರು ಕೋತಿಗಳು, ಹನ್ನೆರಡು ಕಾಡುಕೋಳಿಗಳು, ಹರಿಣಾಕ್ಷಮ್ಮನವರ ಮನೆ ಮುಂದೆ ಹಾಜರಾದವು. ಜೊತೆಗೆ ಕುಮಾರಿ ಕರಿಮುಸುಡಮ್ಮ, ಶ್ರೀ ಕೆಂಪುಜುಟ್ಟಪ್ಪನವರು ಠಾಕುಠೀಕಾಗಿ ಬಂದು ನಿಂತರು. ಎಲ್ಲರೂ ದೇವರ ಪ್ರಾರ್ಥನೆ ಮಾಡಿ ಹೊರಟರು. ಅವರು ಹೊರಟಿದ್ದು ಕೆಂಜಿಗಮನೆ ಕಾಡಿಗೆ. 'ಮುಂದೆ

ಮುಂದೆ ಸಾಗುವ, ನಾವು ಜೊತೆಗೆ ಹೋಗುವ. ಜಿಂಕೆ, ಕೋತಿ, ಕೋಳಿಗಳು ಒಂದುಗೂಡಿ ಹೋಗುವ' ಎಂಬ ಹಾಡನ್ನು ಶ್ರೀ ಕೆಂಪುಜುಟ್ಟಪ್ಪನವರು ಕೋಳಿ ರಾಗದಲ್ಲಿ ಹೇಳಿದರು. ಎಲ್ಲರೂ ಅದರಂತೇ ಹಾಡಿದರು.

ಪಿಕ್‌ನಿಕ್ ಕೂಟ ಮುಂದೆ ಸಾಗಿತ್ತು. ಆರನೇ ತರಗತಿ ಕೆಂಪು ಮುಸುಡಿಯ ಗಡವ ಕೋತಿ ಮರದಿಂದ ಮರಕ್ಕೆ ನೆಗೆಯುತ್ತಾ ಮುಂದೆ ದಾರಿ ತೋರಿಸುತ್ತಿತ್ತು. ಮೂರನೇ ತರಗತಿಯ ಕಿರುಕೊಂಬಿನ ಜಿಂಕೆ ಅದು ತೋರಿಸಿದ ದಾರಿಯಲ್ಲಿ ಮುಂದೆ ಹೋಗಿ ತಿರುಗಿ ನೋಡುತ್ತಿತ್ತು. ಆ ರೀತಿ ನೋಡಿದರೆ ದಾರಿಯಲ್ಲಿ ಅಪಾಯವಿಲ್ಲ, ಮುಂದೆ ಬರಬಹುದು ಎಂದರ್ಥ.

ಗುಂಪು ಸುಮಾರು ಅರ್ಧ ಮೈಲು ದೂರ ಹೋಗಿರಬಹುದು. ಅಷ್ಟರಲ್ಲಿ ಸರ ಸರ ಸರ ಎಂಬ ವಿಚಿತ್ರ ಸದ್ದು ಕೇಳಿಸಿತು. ಹರಿಣಾಕ್ಷಮ್ಮನ ಕಿವಿ ನಿಗುರಿ ನಿಂತಿತು. ಒಡನೆ

ಕೆಂಪುಜುಟ್ಟಪ್ಪನವರಿಗೆ ಸಿಳ್ಳು ಹಾಕಿ ತಂಡವನ್ನು ನಿಲ್ಲುವಂತೆ ಸೂಚಿಸಲು ಹೇಳಿದರು. ಕೆಂಪುಜುಟ್ಟಪ್ಪನವರು, ಕೊಕ್ ಕೊಕ್ ಕೊಕ್ ಎಂದು ವಿಚಿತ್ರವಾದ ಸ್ವರ ಮಾಡಿದರು. ಕರಿಮುಸುಡಮ್ಮ 'ಚೀಂ ಚೀಂ' ಎಂದು ಅರಚಿ ಸಂಕೇತ ನೀಡಿದರು.

ಗಡವ ಕೋತಿ ಒಡನೇ ನೆಗೆದು ನೆಲಕ್ಕಿಳಿಯಿತು. ಗಾಬರಿಗೊಂಡ ಹರಿಣಾಕ್ಷಮ್ಮ, 'ಕೇಳಿಸಿತೋ ನಿಮಗೆ ಆ ವಿಚಿತ್ರ ಸದ್ದು! ಏನೋ ಅಪಾಯ ಕಾದಿಹುದು' ಎಂದರು. 'ನೀವು ಹೇಳಿದರೆ ಆ ಸದ್ದು ಎಲ್ಲಿಂದ ಬರುತ್ತಿದೆ ಎಂದು ಯಾರೂ ಸಂಶಯ ಪಡದ ಹಾಗೆ ನೋಡಿ ಬರುತ್ತೇನೆ' ಎಂದ ಗಡವ. 'ಬೇಡ ನಾನೇ ನೋಡಿ ಬರುತ್ತೇನೆ' ಎಂದರು

ಕೆಂಪುಜುಟ್ಟಪ್ಪನವರು. 'ನೀವು ಬೇಡ ಸಾರ್, ಒಂದು ವೇಳೆ ಅದು ಮನುಷ್ಯರು ಮಾಡುವ ಸದ್ದಾದರೆ ಅವರ ಬಳಿ ಬಂದೂಕು ಇರುತ್ತದೆ. ನಿಮ್ಮನ್ನು ಖಂಡಿತ ಕೊಲ್ತಾರೆ. ನೀವು ಹಾರಲೂ ಸಾಧ್ಯವಿಲ್ಲ. ಗಡವನನ್ನಾದರೆ

ಯಾರೂ ಕೊಲ್ಲಲಾರರು. ಅವನೇ ಹೋಗಲಿ' ಎಂದರು ಕರಿಮುಸುಡಮ್ಮ.

ಹರಿಣಾಕ್ಷಿಗೂ ಅದು ಸರಿ ಕಾಣಿಸಿತು. ಅವರೂ ಒಪ್ಪಿದರು. ಕರಿಮುಸುಡಮ್ಮ ಗಡವನನ್ನು ಹತ್ತಿರ ಕರೆದು ಕೆಲವು ಸಲಹೆ ನೀಡಿ ಕಳಿಸಿದರು. ಕಣ್ಣು ಮುಚ್ಚಿ ಬಿಡುವಷ್ಟರಲ್ಲಿ ಗಡವ ಮಾಯವಾದ. ಹೆದರಿದ ಜಿಂಕೆಗಳು ಒಂದರ ಹಿಂದೆ ಒಂದು ಒತ್ತೊತ್ತಿ ನಿಂತವು. ಕೋಳಿಗಳು ಪೊದರಿನ ಮರೆಯಲ್ಲಿ ತಲೆ ಮರೆಸಿಕೊಂಡವು. ಕೋತಿಗಳು ಆದಷ್ಟು ಎತ್ತರದ ಮರ ನೋಡಿ ಹತ್ತಿ ಕುಳಿತವು. ಸದ್ದು ಹಾಗೆ ಕೇಳಿಸುತ್ತಲಿತ್ತು. ಎಲ್ಲರೂ ಭಯದಿಂದ ನಡುಗುತ್ತ ಕುಳಿತರು.

ಅಷ್ಟರಲ್ಲಿ ಗಡವ ಛಂಗನೆ ಹಾರಿ ನೆಲಕ್ಕೆ ಹಾರಿನಿಂತ. ಹರಿಣಾಕ್ಷಮ್ಮ, ಕೆಂಪುಜುಟ್ಟಪ್ಪ ಓಡಿ ಹತ್ತಿರ ಬಂದು 'ಏನು? ಯಾರದು?' ಎಂದು ಕುತೂಹಲದಿಂದ ಕೇಳಿದರು.

'ಸಾರ್, ಅಲ್ಲಿ ಇಬ್ಬರು ಮನುಷ್ಯರು

ಕಬ್ಬಿಣದ ಗರಗಸದಿಂದ ಗಂಧದ ಮರ ಕುಯ್ತಾ ಇದ್ದಾರೆ. ಅವರ ಹತ್ತಿರ ಬಂದೂಕು ಇದೆ. ದೂರದಲ್ಲಿ ಇನ್ನಿಬ್ಬರು ನಿಂತಿದ್ದಾರೆ. ಅವರು ಖಂಡಿತ ಕಳ್ಳರೇ ಇರಬೇಕು' ಎಂದ ಗಡವ.

ತಕ್ಷಣ ಮುಂದೆ ಬಂದ ಕರಿಮುಸುಡಮ್ಮ 'ನೀವ್ಯಾರೂ ಹೆದರಬೇಡಿ. ನನಗೆ ಆಚೆ ಕಾಡಿನ ಬಳಿಯಲ್ಲಿರುವ ಫಾರೆಸ್ಟ್ ಆಫೀಸರರ ಮನೆ ಗೊತ್ತು. ನಾನು ಹೋಗಿ ಅವರನ್ನು ಕರೆತರುತ್ತೇನೆ. ಹರಿಣಾಕ್ಷಮ್ಮ, ನೀವು ಕೂಡಲೇ ಓಡಿಹೋಗಿ ಹೆಡ್‌ಮಾಸ್ಟರ್ ಬಿಳಿಕರೆಡಪ್ಪನವರನ್ನೂ, ಶಾಲಾ ಸಮಿತಿಯ ಅಧ್ಯಕ್ಷ ಶ್ರೀ ಗಜರಾಯರನ್ನೂ ಕರೆತನ್ನಿ. ಅವರು ಆ ಕಡೆಯಿಂದ ಬಂದು ಆ ಕಳ್ಳರು ಓಡಿಹೋಗದಂತೆ ನೋಡಿಕೊಳ್ಳಲಿ. ಕೋಳಿಗಳೂ ಕೋತಿಗಳೂ, ಜಿಂಕೆಗಳು ಅವರವರ ಮನೆಗೆ ತೆರಳಲಿ' ಎಂದರು. ಅವರ ಸಲಹೆ ಎಲ್ಲರಿಗೂ ಒಪ್ಪಿಗೆಯಾಯಿತು.

ಕರಿಮುಸುಡಮ್ಮ ಒಂದು ಕ್ಷಣವೂ

ನಿಲ್ಲದೆ ಮರದಿಂದ ಮರಕ್ಕೆ ನೆಗೆಯುತ್ತ ಕಾಡಿನ ಹಸುರಿನಲ್ಲಿ ಮಾಯವಾದಳು. ಜಿಂಕೆ, ಕೋತಿ, ಕೋಳಿಗಳು ತಮ್ಮ ತಮ್ಮ ಮನೆಗೆ ತೆರೆಳಿದವು. ಹರಿಣಾಕ್ಷಮ್ಮ ಎಲ್ಲರಿಗೂ ತನ್ನ ಜೊತೆ ಓಡಿ ಬರುವಂತೆ ಸೂಚಿಸಿ ಓಡಿದರು.

ರೇಂಜ್ ಆಫೀಸರ್ ಕರಿಯಪ್ಪನವರು ಬೆಳಗಿನ ಉಪಹಾರ ಮುಗಿಸಿ ಗಸ್ತು ತಿರುಗಲು ಜೀಪ್ ರೆಡಿಮಾಡಿ ನಿಂತಿದ್ದರಷ್ಟೆ, ಆಗ ಛಂಗನೆ ಅವರ ಬಳಿ ನೆಗೆದು ನಿಂತ ಕರಿಮುಸುಡಮ್ಮನನ್ನು ಕಂಡು 'ಏನಮ್ಮಾ, ಬೆಳಿಗ್ಗೆಯೆ ಬಂದುಬಿಟ್ಟೆ. ಲೋ ಬೋರಾ, ಒಂದೆರಡು ಬಾಳೆಹಣ್ಣು ತಾ' ಎಂದು ಆಳಿಗೆ ಹೇಳಿದರು.

ಕರಿಮುಸುಡಮ್ಮ ಕರಿಯಪ್ಪನವರ ಕೈ ಹಿಡಿದು ಜೀಪಿನ ಕಡೆ ತೋರಿಸಿತು. ಕರಿಯಪ್ಪನವರಿಗೆ ಅರ್ಥವಾಯಿತು. ತನ್ನ ಕಾಡಿನ ಕಡೆ ಕೈ ತೋರಿಸುತ್ತಾ ಕರಿಮುಸುಡಮ್ಮ ಮರ ಕುಯ್ಯುವ

ಅಭಿನಯ ಮಾಡಿದಳು. ಕರಿಯಪ್ಪ ಕೂಡಲೇ ತಮ್ಮ ಜೇಬಿನಿಂದ ಸೀಟಿ ತೆಗೆದು ಊದಿದರು. ಹತ್ತಿರದ ಕ್ವಾರ್ಟರ್ಸ್‌ಗಳಲ್ಲಿದ್ದ ಅರಣ್ಯ ಪೋಲಿಸ್ ಬಂದೂಕು ಧರಿಸಿ ಹೊರಬಂದರು. 'ಲೋ ತಿಮ್ಮಯ್ಯ, ಒಡನೇ ಇನ್ನೊಂದು ಜೀಪಿನಲ್ಲಿ ಆರು ಜನರೂ ಮತ್ತು ಈ ಜೀಪಿನಲ್ಲಿ ಆರು ಜನ ಹತ್ತಿ, ಆ ಕಡೆ ಕಾಡಿಗೆ ಹೋಗಬೇಕು. ಅಲ್ಲೆಲ್ಲೋ ಗಂಧದ ಮರ ಕುಯ್ತಿದ್ದಾರೆ' ಎಂದು ಕರಿಯಪ್ಪ ದಫೇದಾರ್ ತಿಮ್ಮಯ್ಯನಿಗೆ ಹೇಳಿದರು.

ಜೀಪುಗಳು ಸದ್ದು ಮಾಡದೆ ಹೊರಟವು. ಕರಿಮುಸುಡಮ್ಮ ಮುಂದೆ ಮರದಿಂದ ಮರಕ್ಕೆ ಹಾರುತ್ತಾ ಸಾಗಿ ತನಗೆ ಸದ್ದು ಕೇಳಿಸಿದ ಜಾಗಕ್ಕೆ ಬಂದಳು.

ಜೀಪು ನಿಂತಾಗ ಕರಿಯಪ್ಪನವರಿಗೂ ಮರ ಕುಯ್ಯುವ ಸದ್ದು ಕೇಳಿಸಿತು. ಅವರು ತಮ್ಮ ದಳಕ್ಕೆ ತಕ್ಕ ಸೂಚನೆ ನೀಡಿ ಕಳ್ಳರನ್ನು ಹಿಡಿಯುವ ಉಪಾಯ ಹೇಳಿಕೊಡುತ್ತಿದ್ದರು. ಅಷ್ಟರಲ್ಲಿ ಆ ಕಡೆ

ಗಜರಾಯರು ಘೀಳಿಡುವ ಸದ್ದು ಕೇಳಿಸಿತು. ಒಡನೆ ನಾಲ್ಕು ಜನ ದಡ ದಡ ಓಡುತ್ತಾ ಬರುವುದೂ ಕಾಣಿಸಿತು.

ನಾಲ್ಕು ಕಡೆಗಳಿಂದ ಅವರನ್ನು ಅರಣ್ಯ ಪೋಲಿಸರು ಸುತ್ತುವರಿದಿದ್ದರು. 'ನಿಲ್ಲಿ ನಿಮ್ಮ ಕೈಯಲ್ಲಿರುವ ಬಂದೂಕು ಬಿಸಾಡಿ; ಅಲುಗಾಡಿದರೆ ಗುಂಡು ಹಾರಿಸುತ್ತೇವೆ" ಎಂದು ಗರ್ಜಿಸಿದರು ಕರಿಯಪ್ಪ. ಗಂಧದಮರ ಕುಯ್ಯುವ ನಾಲ್ಕು ಜನ ಕಳ್ಳರು ಬಂದೂಕು ಬಿಸಾಡಿ ಶರಣಾಗತರಾದರು.

ಅಷ್ಟರಲ್ಲಿ ಹೆಡ್‌ಮಾಸ್ಟರ್ ಬಿಳಿಕರಡೆಪ್ಪನವರೂ, ಶ್ರೀ ಗಜರಾಯರೂ ಕಾಣಿಸಿಕೊಂಡರು. 'ಸಾರ್ ಆನೆ, ಸಾರ್ ಕರಡಿ' ಎಂದು ದಫೇದಾರ್ ತಿಮ್ಮಯ್ಯ ಕೂಗಿದ. ಅಷ್ಟರಲ್ಲಿ ಕರಿಮುಸುಡಮ್ಮ ಗಜರಾಯರ ಬೆನ್ನಿಗೆ ಹಾರಿ ತಲೆಯನ್ನೊಮ್ಮೆ ತನ್ನ ಎದೆಯನ್ನೊಮ್ಮೆ ಮುಟ್ಟಿ 'ಇವರು ನಮ್ಮವರು' ಎಂದು ಸನ್ನೆ ಮಾಡಿದಳು.

‘ಅವು ಏನೂ ಮಾಡೊಲ್ಲ. ಅವೆಲ್ಲ ಅಭಯಾರಣ್ಯದ ಪ್ರಾಣಿಗಳು ನಡೀರಿ. ಈ ಕಳ್ಳರನ್ನು ಬೇಡಿ ಹಾಕಿ ಜೀಪಿಗೆ ನೂಕಿ. ಇವರು ಮರ ಕಡೀತಿದ್ದ ಜಾಗಕ್ಕೆ ನಡೀರಿ’ ಎಂದರು.

ಕರಿಮುಸುಡಮ್ಮ, ಹರಿಣಾಕ್ಷಮ್ಮ, ಕೆಂಪುಜುಟ್ಟಪ್ಪ, ಹೆಡ್‌ಮಾಸ್ಟರ್ ಬಿಳಿಕರೆಡಪ್ಪ, ಶ್ರೀ ಗಜರಾಯ ಮುಂತಾದವರು ಕಳ್ಳರ ಕಡೆ ದುರು ದುರು ನೋಡುತ್ತಾ ನಿಂತಾಗ ಕರಿಯಪ್ಪನವರು ಮುಂದೆ ಬಂದು ಕರಿಮುಸುಡಮ್ಮನ ಕೈ ಕುಲುಕಿ, ‘ತುಂಬ ಧನ್ಯವಾದಗಳು ಕರಿಮುಸಡಮ್ಮ. ನಿಮ್ಮಿಂದಾಗಿ ನಮ್ಮ ಕಾಡಿನ ಸಂಪತ್ತು ಉಳಿಯಿತು’ ಎಂದರು.

ಪ್ರಾಣಿಗಳು ಕಾಡಿಗೆ ಮರಳಿದವು.

ಶಾಲಾರಂಭದ ದಿನ ಹೆಡ್‌ಮಾಸ್ಟರ್ ಬಿಳಿಕರಡೆಪ್ಪನವರು ಈ ಸಂಗತಿಯನ್ನು ಎಲ್ಲರ ಮುಂದೆ ಹೇಳಿದಾಗ, ಗಜರಾಜರು ಎರಡು ಹಾರಗಳನ್ನು ತಂದು ಒಂದನ್ನು ಗಡವನಿಗೂ,

ಇನ್ನೊಂದನ್ನು ಕರಿಮುಸಡಮ್ಮನಿಗೂ ತೊಡಿಸಿ, ಹರಿಣಾಕ್ಷಿಯ ಬೆನ್ನು ಚಪ್ಪರಿಸಿದರು.*

**ಲೇಖಕರು: ರಸಿಕ ಪುತ್ತಿಗೆ**
**ಆಕರ: ಶತಮಾನದ ಮಕ್ಕಳ ಸಾಹಿತ್ಯ**

**ಆಲೋಚಿಸು:**
* ಉಪಾಧ್ಯಾಯಿನಿ ಹರಿಣಾಕ್ಷಿಯವರು ಪಿಕ್‌ನಿಕ್‌ಗೆ ಹೋಗುವ ಯೋಜನೆ ಹಾಕಿಕೊಂಡಿರದೆ ಇದ್ದಿದ್ದರೆ ಏನಾಗುತ್ತಿತ್ತು?

# ಊಟದ ಚಮತ್ಕಾರ



ಒಂದು ದಿನ ರಾಜ ಮಲಯಸಿಂಹ ಕಾಡುದಾರಿಯಲ್ಲಿ ಬರುತ್ತಿದ್ದಾಗ ದಾರಿ ತಪ್ಪಿದ. ಅಷ್ಟರಲ್ಲಿ ಮಳೆ ಜೋರಾಗಿ ಸುರಿಯಿತು. ಬಿರುಗಾಳಿ ಬೀಸತೊಡಗಿತು. ಕತ್ತಲು ಎಲ್ಲೆಡೆ ಮುಸುಕಿತ್ತು. ರಾಜನಿಗೆ ಬೇರೆ ದಾರಿ ಕಾಣಲಿಲ್ಲ. ಸ್ವಲ್ಪ ದೂರದಲ್ಲಿ ಒಂದು ಗುಡಿಸಲು ಕಂಡಿತು. ರಾಜ ಅತ್ತ ಓಡಿದ. ಗುಡಿಸಲಿನ ಬಾಗಿಲು ತಟ್ಟಿದ. ಮನೆಯಾಕೆ ಬಾಗಿಲನ್ನು ತೆರೆದು ಅವನನ್ನು ಸ್ವಾಗತಿಸಿದಳು. ಅವನಿಗೆ ಆಶ್ರಯ ಕೊಟ್ಟಳು.

ರಾಜನಿಗೆ ಹಸಿವಾಗಿತ್ತು. ಮನೆಯಾಕೆ ಅವನಿಗೆ ರಾಗಿ ರೊಟ್ಟಿಯನ್ನು ಕೊಟ್ಟು ಉಪಚರಿಸಿದಳು. ರಾಜನಿಗೆ ಅರಮನೆಯ ರುಚಿ ರುಚಿ ಊಟಕ್ಕಿಂತ ರೊಟ್ಟಿ ಚೆನ್ನಾಗಿದೆ ಅನ್ನಿಸಿತು. ಒಮ್ಮೆ ಗುಡಿಸಲಿನಲ್ಲಿ ಕಣ್ಣು ಹಾಯಿಸಿದ. ಗುಡಿಸಲು ಚಿಕ್ಕದಾಗಿದ್ದರೂ ಸ್ವಚ್ಛವಾಗಿತ್ತು. ದೂರದಲ್ಲಿ ಮಗುವೊಂದು ಕುಳಿತಿತ್ತು. ತಟ್ಟೆಯಲ್ಲಿದ್ದ ರೊಟ್ಟಿಯನ್ನು ಸಂತೋಷದಿಂದ ತಿನ್ನುತ್ತಿತ್ತು. ಅದು ತುಂಬ ದಷ್ಟಪುಷ್ಟವಾಗಿತ್ತು, ಆರೋಗ್ಯವಾಗಿತ್ತು, ಸುಂದರವಾಗಿತ್ತು.

ರಾಜನಿಗೆ ತನ್ನ ಮಗುವಿನ ನೆನಪಾಯಿತು. ರುಚಿಯಾದ ಊಟ, ಹಾಲು, ಹಣ್ಣು, ಇತ್ಯಾದಿ ಮಗುವಿಗೆ ಕೊಡಲಾಗುತ್ತಿತ್ತು. ರಾಜವೈದ್ಯರು ದಿನವೂ ತಪ್ಪದೆ ಮಗುವಿನ ಆರೋಗ್ಯವನ್ನು ನೋಡುತ್ತಿದ್ದರು. ಇಷ್ಟಾದರೂ ಮಗು ನರಪೇತಲ. ಸಣಕಲು ಕಡ್ಡಿಯಂತಿತ್ತು. ಎಷ್ಟು ಉಪಚರಿಸಿದರೂ ಅದು ದಷ್ಟಪುಷ್ಟವಾಗಿ ಬೆಳೆದಿರಲಿಲ್ಲ.

ರಾಜ ಕುತೂಹಲವನ್ನು ತಡೆಯಲಾರದೆ ಮನೆಯಾಕೆಯನ್ನು ಕಾರಣ ಕೇಳಿದ. ಅವಳು ನೀಡಿದ ಉತ್ತರ ಅವಳನ್ನು ದಂಗುಬಡಿಸಿತು.

“ನಾನು ಮತ್ತು ನನ್ನ ಗಂಡ ಕಷ್ಟಪಟ್ಟು ಹೊಲದಲ್ಲಿ ಕೆಲಸ ಮಾಡುತ್ತೇವೆ. ನಮ್ಮ ಆಹಾರ ನಮ್ಮ ಶ್ರಮದಿಂದ ಬಂದಿದ್ದು. ನಾವು ಹೊರಗಿನ ಆಹಾರ ಪದಾರ್ಥವನ್ನು ಉಪಯೋಗಿಸುವುದಿಲ್ಲ. ನಾವೇ ಬೆಳೆದುಕೊಳ್ಳುತ್ತೇವೆ. ಮಗುವಿಗೆ ಮೈಮರೆತು ಹೆಚ್ಚು ಊಟ ಕೊಡುವುದಿಲ್ಲ.

ಬಕಾಸುರನಂತೆ ತಿನ್ನುವುದನ್ನು ನಾವು ಪ್ರೋತ್ಸಾಹಿಸುವುದಿಲ್ಲ. ಹಿತ-ಮಿತ ಆಹಾರದಿಂದ ಮಗುವಿನ ಆರೋಗ್ಯ ಕೆಡುವುದಿಲ್ಲ. ‘ಹಸಿವಿನಷ್ಟೆ ಊಟ’ ಇದು ನಮ್ಮ ಮಂತ್ರ’.

ಮನೆಯಾಕೆಯ ಮಾತು ಕೇಳಿ ರಾಜನಿಗೆ

ತನ್ನ ಮಗುವಿನ ಆರೋಗ್ಯ ಏಕೆ ಕೆಡುತ್ತಿದೆ ಎಂಬ ಕಟುಸತ್ಯ ಅರ್ಥವಾಯಿತು.*

**ಲೇಖಕರು: ಎಂ. ವಿ. ನಾಗರಾಜರಾವ್**
**ಆಕರ: ಸಾರ್ಥಕ ಬದುಕಿಗೆ ನೂರು ಸ್ಫೂರ್ತಿ ಕತೆಗಳು**

**ಆಲೋಚಿಸು:**
* ಉತ್ತಮ ಆರೋಗ್ಯಕ್ಕಾಗಿ ನಾವು ದಿನನಿತ್ಯ ಸೇವಿಸುವ ಆಹಾರ ಹೇಗಿರಬೇಕು ಎನ್ನುವುದರ ಕುರಿತು ಗೆಳೆಯ/ಗೆಳತಿಯರೊಂದಿಗೆ ಮಾತನಾಡು.



# Hungry Wolf

This is a short story about Hungry[1] Wolf.

Once, a wolf was very hungry. It looked for food here and there. But it couldn't get any. At last it found a loaf of bread and piece of meat[2] in the hole of a tree.

**ಹೊಸಪದಗಳ ಅರ್ಥ**

1. **Hungry** (ಹಂಗ್ರಿ) – ಹಸಿವು
2. **Meat** (ಮೀಟ್) – ಮಾಂಸ

The hungry wolf squeezed[3] into the hole[4]. It ate all the food. It was a woodcutter's[5] lunch. He was on his way back to the tree to have lunch. But he saw there was no food in the hole, instead, a wolf.

On seeing the woodcutter, the wolf tried to get out of the hole. But it couldn't. Its tummy was swollen[6].

**ಹೊಸಪದಗಳ ಅರ್ಥ**

**3. Squeeze** (ಸ್ಕ್ವೀಜ್) – ಹಿಂಡು/ಹಿಚುಕು
**4. Hole** (ಹೋಲ್) – ಬಿಲ/ಕಿಂಡಿ
**5. Woodcutter** (ವುಡ್‌ಕಟ್ಟರ್) – ಮರ ಕಡಿಯುವವ
**6. Swollen** (ಸ್ವೋಲನ್) – ಊದಿಕೊಂಡಿರುವ

The woodcutter caught the wolf and gave it nice beatings[7]. *

**ಆಕರ: http://www.english-for-students.com**

**ಹೊಸಪದಗಳ ಅರ್ಥ**

**7. Beat** (ಬೀಟ್) **– ಹೊಡೆತ**



## ನಮ್ಮ ಮಹದಾಶಯ:

ಕಥಾಮಂಟಪದಲ್ಲಿನ ಕಥೆಗಳನ್ನು ಓದಿ ನಿಮಗೆ ತುಂಬಾ ಖುಷಿಯಾಗುತ್ತಿದೆ, ಅಲ್ಲವೆ? ಕಥೆಗಳ ಕೊನೆಯಲ್ಲಿ ಅವುಗಳ ಆಕರಗಳನ್ನೂ ಕೊಡಲಾಗಿರುತ್ತದೆ. ಆ ಪುಸ್ತಕಗಳನ್ನು ಕೊಂಡು ಅಥವಾ ಗ್ರಂಥಾಲಯದಿಂದ ಎರವಲು ಪಡೆದು ಇನ್ನೂ ಹೆಚ್ಚಿನ ಕಥೆಗಳನ್ನು ಓದಿ ಆನಂದಿಸಲು ಸಾಧ್ಯವಾಗಲಿ ಎಂಬ ಮಹದಾಶಯ ನಮ್ಮದು. ಸಾಧ್ಯಮಾಡಿಕೊಂಡು ಮೂಲ ಲೇಖಕರಿಗೆ ಪತ್ರ ಬರೆದು ನಿಮ್ಮ ಖುಷಿಯನ್ನು ಹಂಚಿಕೊಳ್ಳುವುದು ಇನ್ನೂ ಒಳ್ಳೆಯದು.

**ಸಂಪರ್ಕ ಮಾಹಿತಿ:**
**ಧ್ವನಿ**
**ಶೈಕ್ಷಣಿಕ ಸಂಪನ್ಮೂಲ ಕೇಂದ್ರ**
**# 76, 'ಪುಷ್ಪಾಂಜಲಿ' 3ನೇ ಅಡ್ಡರಸ್ತೆ,**
**ಶಿವಗಿರಿ, ಧಾರವಾಡ 580 007**
**ಮೊ: 99866 61055**
**dhwanitrust@gmail.com,**
**www.dhwanitrust.org**

ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.